ಆ) ರೈತರ ಹಿತದೃಷ್ಟಿಯಿಂದಲೇ, ಇತರ ವಿದ್ಯುತ್ ಬಳಕೆದಾರರಿಗೆ ವಿಧಿಸಿರುವ ವಿದ್ಯುತ್ ವಿದ್ಯುತ್ ದರಗಳಿಗೆ ಹೋಲಿಸಿದಲ್ಲಿ ನೀರಾವರಿ ಪಂಪುಸೆಟ್ಟುಗಳ ಬಳಕೆದಾರರಿಗೆ ವಿಧಿಸಿರುವ ವಿದ್ಯುತ್ ದರವು ದುಬಾರಿಯಾಗಿರುವುದಿಲ್ಲ.

ಇ) ಮತ್ತು ಈ) ಸುಟ್ಟು ಹೋದ ಟ್ರಾನ್ಸ್‌ಫಾರ್ಮರ್‌ನ್ನು ಬದಲಾಯಿಸಿ ಹೊಸದನ್ನು ಅಳವಡಿಸಲು ಸಾಕಷ್ಟು ವೆಚ್ಚ ತಗಲುವುದರಿಂದ ಸಂಬಂಧಪಟ್ಟ ಗ್ರಾಹಕರಿಂದ ಬಾಕಿ ಇರುವ ಹಣವನ್ನು ಪಾವತಿ ಮಾಡಿ ಮಂಡಳಿಯೊಡನೆ ಸಹಕರಿಸುವಂತೆ ಕೇಳಿಕೊಳ್ಳಲಾಗುತ್ತಿದೆ. ಬಾಕಿ ಹಣವನ್ನು ಹಾಗೇಯೇ ಬಿಟ್ಟರೆ, ಮಂಡಳಿಯ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಳ್ಳಲು ತೊಂದರೆಯಾಗುವುದರಿಂದ ಈ ರೀತಿಯ ಒತ್ತಡ ತರುವುದು ಅನಿರ್ವಾಯವಾಗಿರುತ್ತದೆ. ರೈತರೂ ಸೇರಿದಂತೆ ಎಲ್ಲಾ ವಿದ್ಯುತ್ ಬಳಕೆದಾರರು, ಮಂಡಳಿಗೆ ನೀಡ ಬೇಕಾಗಿರುವ ವಿದ್ಯುತ್ ಬಾಕಿಯನ್ನು ಪಾವತಿ ಮಾಡಿ, ಮಂಡಳಿಯೊಡನೆ ಸಹಕರಿಸಬೇಕಾಗಿದೆ.

ದೇವನಹಳ್ಳಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

688 (902) ಶ್ರೀ ವಿ. ಮುನಿಯಪ್ಪ (ಶಡ್ಲಘಟ್ಟ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಸರ್ಕಾರದ ಇತ್ತೀಚಿನ ನಿಲುವೇನು?

ಆ) ಈ ದಿಸೆಯಲ್ಲಿ ರಾಜ್ಯ ಸರ್ಕಾರದಿಂದ ಕಾಮಗಾರಿ ಪ್ರಾರಂಭ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?

ಇ) ಕಾಮಗಾರಿಯು ಪ್ರಾರಂಭವಾಗಲು ವಿಳಂಭವಾಗುವುದಕ್ಕೆ ನಿರ್ದಿಷ್ಟ ಕಾರಣಗಳೇನು?

ಶ್ರೀ ಬಿ.ಎಲ್.ಶಂಕರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬೆಳೆಯುತ್ತಿರುವ ವಿಮಾನ ಸಂಚಾರ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ಪ್ರತ್ಯೇಕ ಅಂತರರಾಷ್ಟ್ರೀಯ ಗುಣಮಟ್ಟದ ನಾಗರೀಕ ವಿಮಾನ ನಿಲ್ದಾಣದ ಸ್ಥಾಪನೆಯು ಅತಿ ಅವಶ್ಯಕವೆಂಬ ನಿಲುವನ್ನು ರಾಜ್ಯ ಸರ್ಕಾರವು ಮೊದಲಿನಿಂದಲೂ ಹೊಂದಿದೆ.

ಆ) ಡಿಸೆಂಬರ್ 1995ರಲ್ಲಿ ಕೆಎಸ್‌ಐಐಡಿಸಿ ಮತ್ತು ಟಾಟಾ ರೇತಿಯಾನ್-ಸಿಂಗಾಪುರ್ ಗ್ರೂಪ್‌ನ ಒಕ್ಕೂಟದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. 1996ರ ನವೆಂಬರ್‌ರಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಅಂತಿಮ ಒಪ್ಪಿಗೆಗಾಗಿ ಕೇಳಿತ್ತು. ರಾಜ್ಯ ಸರ್ಕಾರವು ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದ ನಂತರ ಕೇಂದ್ರ ಸರ್ಕಾರವು ಕೆಲವು ಅಂಶಗಳ ಮೇಲೆ ಸ್ಪಷ್ಟೀಕರಣ ಕೇಳಿತ್ತು, ಆದಾಗ್ಯೂ ಹಲವಾರು ಅಂಶಗಳು ಇತ್ಯರ್ಥಗೊಂಡಿದೆ. ಕೇಂದ್ರ ಸರ್ಕಾರದಲ್ಲಿ ಎರಡು ಅಂಶಗಳ ಮೇಲೆ ಲಘು ಸ್ಪಷ್ಟೀಕರಣಗಳು ಬಾಕಿ ಇವೆ. ಕೇಂದ್ರ ಸರ್ಕಾರದ ವಾಯು ಮಂತ್ರಾಲಯದಿಂದ ಮೇಲೆ ಹೇಳಿದ ಅಂಶಗಳ ಮೇಲೆ ಮುಂದಿನ ಸ್ಪಷ್ಟೀಕರಣ ಸದ್ಯದಲ್ಲೇ ಬರುವ ನಿರೀಕ್ಷೆ ಇದೆ. ಈ ವಿಷಯದಲ್ಲಿ ಮುಖ್ಯ ಮಂತ್ರಿಯವರಿಂದ ಕೇಂದ್ರ ವಾಯುಯಾನ ಸಚಿವರಿಗೆ ಒಂದು ಪತ್ರ ಹೋಗಿದೆ . ಕೆಐಎಡಿಬಿಯು ಈ ಯೋಜನೆಗೆಂದು ದೇವನಹಳ್ಳಿ ಬಳಿ 4276 ಎಕರೆ ಮತ್ತು 111/2 ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲು ಅಧಿಸೂಚಿಸಿದೆ. ವಶಪಡಿಸಿಕೊಳ್ಳುವ ವ್ಯವಹಾರಣೆಗಳು ಕೊನೆಯ ಹಂತದಲ್ಲಿವೆ.

ಇ) ರಾಜ್ಯ ಸರ್ಕಾರಕ್ಕೆ ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದ ನಂತರ ಕೇಂದ್ರ ಸರ್ಕಾರವು ಕೆಲವು ಅಂಶಗಳ ಮೇಲೆ ಸ್ಪಷ್ಟೀಕರಣ ಕೇಳಿದೆ ಈ ಅಂಶಗಳನ್ನು ವಿವರವಾಗಿ ಚರ್ಚಿಸಬೇಕಾಗಿತ್ತು. ಕೇಂದ್ರ

ಸರ್ಕಾರದೊಡನೆ ನಡೆದ ಚರ್ಚೆಯಲ್ಲಿ ಕೆಲವು ಪರಿಷ್ಕೃತ ಅಂಶಗಳನ್ನು ಸೂಚಿಸಲಾಗಿದೆ. ಈ ಆಧಾರದ ಮೇಲೆ ಯೋಜನೆಯ ಟೆಕ್ನೋ ಏಕನಾಮಿಕ್ ಫೀಸಬಿಲಿಟಿ ವರದಿಯನ್ನು ಮತ್ತೊಮ್ಮೆ ಪುರ್ನಲೋಕಿಸಲಾಗಿದೆ ಮತ್ತು ಈ ಯೋಜನೆಯು ಕಾರ್ಯರೂಪಕ್ಕೆಬರಲು ಸಹಾಯಕವಾಗುವಂತಹ ಅವಶ್ಯಕವಾದ ಮೂಲ ಪ್ಯಾರಾ ಮೀಟರ್ಸ್‌ಗಳನ್ನು ಸೂಚಿಸುವಂತೆ ಕೇಳಿಕೊಳ್ಳಲಾಗಿದೆ. ಈ ಮೇಲಿನ ಎಲ್ಲಾ ಅಂಶಗಳಿಂದ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ದೊರೆಯಲು ವಿಳಂಬವಾಗುತ್ತಿದೆ.

ಹೇಮಾವತಿ ನೀರಿನಿಂದ ಜಲಾವೃತಗೊಂಡಿರುವ ಗ್ರಾಮಗಳು

689 (643) ಶ್ರೀ ಬಿ. ನಂಜಾಮರಿ(ತಿಪಟೂರು) : ಮಾನ್ಯ ಬೃಹತ್‌ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ತಿಪಟೂರು ತಾಲ್ಲೂಕಿಗೆ ಹೇಮಾವತಿ ನಾಲೆ ನೀರು ಬಿಟ್ಟಿರುವುದರಿಂದ ಗಂಗನ ಘಟ್ಟ ಸಾಸಲಹಳ್ಳಿ ಹರಿಜನ ಕಾಲೋನಿ, ಬಜಗೂರು, ಬಳ್ಳಕ್ಕೆರೆ ಮತ್ತು ಮತಿಘಟ್ಟ ಗ್ರಾಮಗಳು ಜಲಾವೃತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ)ಹಾಗಿದ್ದಲ್ಲಿ ಈ ಗ್ರಾಮಗಳು ಜಲವೃತ ಗೊಂಡಿರುವುದರಿಂದ ಆಗಿರುವ ನಷ್ಟದ ಪ್ರಮಾಣವೆಷ್ಟು; ಹಾಗೂ ಈವರೆವಿಗೂ ಕೈಗೊಂಡ ಕ್ರಮಗಳೇನು;

ಶ್ರೀ ಕೆ.ಎನ್ ನಾಗೇಗೌಡ (ಬೃಹತ್‌ನೀರಾವರಿ ಸಚಿವರು) :

ಅ) ಹೌದು

ಆ) ಉಂಟಾಗಿರುವ ನಷ್ಟದ ಪ್ರಮಾಣ ಹಾಗೂ ಪರಿಹಾರತ್ಮಕ ಕ್ರಮಗಳನ್ನು ತೆಗೆದುಕೊಳ್ಳವುದರ ಬಗ್ಗೆ ಪರಿಶೀಲಿಸಲಾಗುವುದು.

ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ನಬಾರ್ಡ್ ನೆರವು

691 (784) ಶ್ರೀ ಬಿ. ನಂಜಾಮರಿ(ತಿಪಟೂರು) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಈ ವರ್ಷ ಮೀಸಲಿಟ್ಟ ಹಣವೆಷ್ಟು?

ಆ) ಈ ಮಂಡಳಿಯ ವ್ಯಾಪ್ತಿಗೆ ಒಳಪಡುವ ತಾಲ್ಲೂಕುಗಳೆಷ್ಟು ? ಒಂದೊಂದು ತಾಲ್ಲೂಕಿಗೆ ಮೀಸಲಿಡಲಾಗಿದ್ದ ಹಣವೆಷ್ಟು?

ಇ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ನಬಾರ್ಡ್ ನೆರವು ಪಡೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ತಿಪಟೂರು ಕ್ಷೇತ್ರಕ್ಕೆ ಎಷ್ಟು ಹಣ ಮೀಸಲಾಗಿಡಲಾಗಿತ್ತು, ಇಷ್ಟು ಹಣ ಬಿಡುಗಡೆ ಮಾಡಲಾಗಿದೆ. ಹಾಗೂ ಇದುವರೆಗೂ ಖರ್ಚುಮಾಡಲಾದ ಹಣ ಎಷ್ಟು?

ಶ್ರೀಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :

ಅ)ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 1998-99ನೇ ಸಾಲಿನಲ್ಲಿ 850-00 ಲಕ್ಷ ರೂ.ಗಳನ್ನು ಮೀಸಲಾಗಿಡಲಾಗಿದೆ.